# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 04/2020-21 ದಿನಾಂಕ: 21.11.2020

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:21/11/2020 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | ಅಧಿಕಾರಿಗಳು | | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಜಿ.ಎಂ.ಲಕ್ಷ್ಮಿನರಸಿಂಹ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, BWSSB | 9845444495 |
| 3 | ಶ್ರೀ.ಚಂದನ್ | ಸಹಾಯಕ ಅಭಿಯಂತರರು BWSSB | 9449390066 |
| 4 | ಶ್ರೀ.ವೀರಭದ್ರಯ್ಯ | ಬಿ.ಡಿ.ಎ ಅಭಿಯಂತರರು | 9663863446 |
| 5 | ಶ್ರೀ.ಶ್ರೀನಿವಾಸ ಮೂರ್ತಿ ಕೆ.ಆರ್ | ಜೆ.ಇ BESCOM E-11 | 9449909942 |
| 6 | ಶ್ರೀ.ರಮೇಶ್ | ಜೆ.ಇ ಹೊರಮಾವು ವಾರ್ಡ-25 | 9739838297 |
| 7 | ಮುಕುಲ್.ಎಸ್ | ಸಹಾಯಕ ಅಭಿಯಂತರರು, ಮೇಜರ್ ರೋಡ್ಸ್ | |
| 8 | ಶ್ರೀ.ಹರೀಶ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | - |
| 9 | ಶ್ರೀ.ಕೋದಂಡಪ್ಪ | ಬೀದಿದೀಪ | 9902031602 |
| 10 | ಶ್ರೀ.ಕಾರ್ತಿಕ್ | ವಾರ್ಡ್ ಮಾರ್ಷಲ್ | 8147940213 |
| | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು. | | |
| 11 | ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ | - | - |
| 12 | ಯುನಿಟಿ ಎನ್‌ಕ್ಲೇವ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - | - |
| 13 | ಶ್ರೀ.ದಯಾನಂದ್ | | |
| 14 | ಶ್ರೀ.ಆರ್ಮುಗಂ ಹಾಗೂ ದಾಮೋದರನ್ | | |
| 15 | ಶ್ರೀಮತಿ.ಸಿಂಧು ಜಾನ್ಸನ್ ಕನಕಗಿರಿ ಬಡಾವಣೆ | - | - |
| 16 | ಶ್ರೀಮತಿ.ಸುಜಾತ ನಂದನಂ ಬಡಾವಣೆ | - | - |
| 17 | ಶ್ರೀ.ಲಿಯೋ ಕ್ರಿಸ್ಟೋ | - | - |

Scanned by CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

## ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

**ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್**:- ಸಾಯಿಬಾಬಾ ಬಡಾವಣೆಯಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗದಿರುವ ಬಗ್ಗೆ ಹಾಗೂ 3ನೇ ಅಡ್ಡರಸ್ತೆಯಲ್ಲಿ ಬೀದಿ ದೀಪಗಳ ನಿರ್ವಹಣೆ ಮಾಡಿರುವುದಿಲ್ಲ. ಸಾಯಿಬಾಬಾ ಬಡಾವಣೆ ಮುಂಭಾಗದಲ್ಲಿ ಬಿ.ಡಿ.ಎ ವತಿಯಿಂದ ಅರ್ಕಾವತಿ ಬಡಾವಣೆ ನಿರ್ಮಿಸಿ, ಬಡಾವಣೆಯನ್ನು ಎತ್ತರಗೊಳಿಸಿದ್ದು, ಈ ಬಡಾವಣೆ ನಿರ್ಮಿಸಿದಾಗಿನಿಂದ ಸಾಯಿ ಬಡವಣೆಯ ನೀರು ಮುಂದೆ ಸರಾಗವಾಗಿ ಹರಿಯದೆ ಮಳೆಗಾಲದಲ್ಲಿ ರಸ್ತೆಗಳಲ್ಲಿ 2 ಅಡಿ ಎತ್ತರಕ್ಕೆ ನಿಲ್ಲುತ್ತಿದ್ದು, ಸಾರ್ವಜನಿಕ ಮನೆಗಳಿಗೆ ಹಾನಿಯುಂಟು ಮಾಡುತ್ತಿರುತ್ತದೆ. ಬಿ.ಡಿ.ಎ ವತಿಯಿಂದ ಅರ್ಕಾವತಿ ಬಡಾವಣೆಯಲ್ಲಿ ಮಳೆನೀರಿನ ಚರಂಡಿ ನಿರ್ಮಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಲು ಬಿ.ಬಿ.ಎಂಪಿ ಮತ್ತು ಬಿ.ಡಿ.ಎ ಅಧಿಕಾರಿಗಳು ಸಮನ್ವಯ ಮಾಡಿಕೊಂಡು ಕೆಲಸವನ್ನು ಪೂರ್ಣಗೊಳಿಸಲು ಕೋರಿರುತ್ತಾರೆ.

**ಕ್ರಮ:-** ಬಿ.ಬಿ.ಎಂ.ಪಿ ವಾರ್ಡ್ ಅಭಿಯಂತರರು ಮತ್ತು ಬಿ.ಡಿ.ಎ ಅಭಿಯಂತರರು ಸಮನ್ವಯ ಮಾಡಿಕೊಂಡು ಕೆಲಸವನ್ನು ಪೂರ್ಣಗೊಳಿಸಲು ಸಭೆಯು ಸೂಚಿಸಿತು.

**ಯುನಿಟಿ ಎನ್‌ಕ್ಲೇವ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ಗೆದ್ದಲಹಳ್ಳಿ ಗ್ರಾಮದ ಹಿಂಭಾಗ ಇರುವ ಯುನಿಟಿ ಎನ್‌ಕ್ಲೇವ್, ಹಿರೇಮಠ್ ಬಡಾವಣೆ, ಆಶಾಲಯ ಬಡಾವಣೆ, ಸೋನಿಯಾಗಾಂಧಿ ನಗರ ರಸ್ತೆಗಳಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಕೊಳವೆಸಾಲು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಈ ರಸ್ತೆಗಳನ್ನು ದುರಸ್ಥಿಮಾಡಲು ಮತ್ತು ಮಳೆನೀರಿನ ಚರಂಡಿಗಳನ್ನು ನಿರ್ಮಿಸಬೇಕಾಗಿದ್ದು, ಹಾಗೂ ಮನೆ-ಮನೆ ಕಸ ವಿಲೇವಾರಿ ಸರಿಯಾಗಿ ಆಗದಿರುವ ಬಗ್ಗೆ ಬೀದಿ ದೀಪಗಳ ನಿರ್ವಹಣೆ ಮತ್ತು ಹೊಸ ಕೊಳವೆಬಾವಿ ಅಳವಡಿಸುವುದು. ಹಾಗೂ ಕೊಳವೆಸಾಲುಗಳು ಒಡೆದು ಹೋಗಿದ್ದು, ದುರಸ್ಥಿ ಮಾಡುವುದು ಮತ್ತು ಈ ಬಡಾವಣೆಯ ಮುಖ್ಯದ್ವಾರದಲ್ಲಿ ರಸ್ತೆಯನ್ನು ಅಗಲೀಕರಣ ಮಾಡಲು ಕೋರಿಕೊಂಡಿರುತ್ತಾರೆ.

ಕ್ರಮ:-ವಾರ್ಡ್ ಸಹಾಯಕ ಅಭಿಯಂತರರು ಹಾಗೂ ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರುಗಳು ಮತ್ತು ಸಹಾಯಕ ಅಭಿಯಂತರರು, ಬೀದಿ ದೀಪಗಳು ಕೂಡಲೇ ಸ್ಥಳ ಪರಿಶೀಲಿಸಿ ಕ್ರಮ ವಹಿಸಲು ಸಭೆಯಲ್ಲಿ ಸೂಚಿಸಲಾಯಿತು.

**ಶ್ರೀ.ದಯಾನಂದ್ ದಾಸಪ್ಪ ಲೇಔಟ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ದಾಸಪ್ಪ ಬಡಾವಣೆ, 2ನೇ ಅಡ್ಡರಸ್ತೆ, 3ನೇ ಬ್ಲಾಕ್ ರಲ್ಲಿ ಶ್ರೀ.ನಾಯ್ಡು ಎಂಬುವವರು ಬಹುಮಹಡಿ ವಸತಿ ಸಮುಚ್ಚಯ ನಿರ್ಮಿಸಿದ್ದು, ರಸ್ತೆಯನ್ನು 4 ಅಡಿ ಒತ್ತುವರಿ ಮಾಡಿದ್ದು, ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ಒತ್ತುವರಿಯನ್ನು ತೆರವುಗೊಳಿಸಲು ಕೋರಿಕೊಂಡಿರುತ್ತಾರೆ.

ಕ್ರಮ:-ವಾರ್ಡ್ ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿತು.

Scanned by CamScanner

<u>**ಶ್ರೀ.ಆರ್ಮುಗಂ ಹಾಗೂ ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-**</u> ರವರು ಮಾತನಾಡಿ 5ನೇ ಬಿ.ಸಿ ಮುಖ್ಯರಸ್ತೆಯಲ್ಲಿ ಡಾಂಬರೀಕರಣ ಮಾಡಲು ಹಾಗೂ ಅಲ್ಲಲ್ಲಿ ಕಳ್ಳತನವಾಗುತ್ತಿದ್ದು ಪ್ರತಿನಿತ್ಯ ಪೋಲೀಸ್ ಬೀಟ್‌ನ್ನು ಕಳುಹಿಸಲು ಮತ್ತು ಕೆಲವು ರಸ್ತೆಗಳಲ್ಲಿ ಕಾವೇರಿ ನೀರು ಸರಿಯಾಗಿ ಬರುತ್ತಿರುವುದಿಲ್ಲ ಮತ್ತು ದಿನದ ಅನೇಕ ಬಾರಿ ಪವರ್ ಬ್ರೇಕ್ ಆಗುತ್ತಿರುವ ಬಗ್ಗೆ ಕೋರಿರುತ್ತಾರೆ.

**ಕ್ರಮ:-** ವಾರ್ಡ್ ಸಂಖ್ಯೆ 25 ರ ಕಿರಿಯ ಅಭಿಯಂತರರಿಗೆ ಕೂಡಲೇ ಡಾಂಬರೀಕರಣ ಮಾಡಲು ಮತ್ತು ಪೋಲೀಸ್ ಇಲಾಖೆ ಬೀಟ್ ಕಾರ್ಯನಿರ್ವಹಿಸಲು ಕ್ರಮವಹಿಸಲು ಮತ್ತು ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸ್ಥಳ ಪರಿಶೀಲಿಸಿ ಕಾವೇರಿ ನೀರು ಸಮರ್ಪಕವಾಗಿ ಸರಬರಾಜು ಮಾಡುವ ಬಗ್ಗೆ ಕ್ರಮ ವಹಿಸಲು ಹಾಗೂ ಸಹಾಯಕ ಅಭಿಯಂತರರು, ಬೆಸ್ಕಾಂ ರವರಿಗೆ ಪವರ್ ಬ್ರೇಕ್ ಆಗುತ್ತಿರುವ ಬಗ್ಗೆ ಸದರಿ ರವರಿಗೆ ತಿಳಿಸಿ ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

<u>**ಶ್ರೀಮತಿ.ಸಿಂಧು ಜಾನ್ಸನ್ (ಕನಕಗಿರಿ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್):-**</u> ಬಂಜಾರ ಬಡಾವಣೆ, ಗೋವಿಂದಪ್ಪ ಲೇಔಟ್ 7ನೇ ಮತ್ತು 8ನೇ ಅಡ್ಡರಸ್ತೆ ಯಲ್ಲಿ ಚರಂಡಿ ನಿರ್ಮಿಸಿ ರಸ್ತೆ ಅಭಿವೃದ್ಧಿ ಪಡಿಸಲು ಹಾಗೂ ಕಸ ವಿಲೇವಾರಿ ಸಮರ್ಪಕವಾಗಿ ಆಗದಿರುವ ಬಗ್ಗೆ 4ನೇ ಅಡ್ಡರಸ್ತೆಯಲ್ಲಿ ಡಿ.ಎಕ್ಸ್ ಮ್ಯಾಕ್ಸ್ ಎದುರು ಶೆಡ್‌ಗಳನ್ನು ನಿಮಿಸಿದ್ದು, ಶೆಡ್‌ಗಳಲ್ಲಿ ಇರುವ ಕಾರ್ಮಿಕರಿಂದ ವಾಹನ ನಿಲುಗಡೆಗೆ ತೊಂದರೆಯಾಗುತ್ತಿದ್ದು, ಸ್ಯಾನಿಟರಿ ವೇಸ್ಟ್‌ನ್ನು ಚರಂಡಿ ಮತ್ತು ರಸ್ತೆಗೆ ಬಿಡುತ್ತಿದ್ದು, ಇದರಿಂದ ತೊಂದರೆಯಾಗುತ್ತಿರುವುದಾಗಿ ಕೋರಿರುತ್ತಾರೆ.

**ಕ್ರಮ:-** ವಾರ್ಡ್ ಸಹಾಯಕ ಅಭಿಯಂತರರು, ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರುಗಳು ಕ್ರಮ ವಹಿಸಲು ಸಭೆಯು ಸೂಚಿಸಲಾಗಿದೆ.

<u>**ಶ್ರೀಮತಿ.ಸುಜಾತ ನಂದನಂ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-**</u> ಪ್ರತಿದಿನ ಕಸವಿಲೇವಾರಿ ಸಮರ್ಪಕವಾಗಿ ನಿರ್ವಹಿಸಲು ಕೋರಿರುತ್ತಾರೆ.

**ಕ್ರಮ:-** ಆರೋಗ್ಯ ನಿರೀಕ್ಷಕರುಗಳು ಕ್ರಮವಹಿಸಲು ಸಭೆಯು ಸೂಚಿಸಿತು.

<u>**ಶ್ರೀ.ಲಿಯೋ ಕ್ರಿಸ್ಟೋ,ಪ್ರಕೃತಿ ಟೌನ್‌ಶಿಪ್ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ ಮುಖ್ಯರಸ್ತೆ:-**</u> ಲೋಗೋ ಚರ್ಚ್ ಮುಖ್ಯರಸ್ತೆಯ ಅಡ್ಡರಸ್ತೆಯಲ್ಲಿ ಚರಂಡಿಯಲ್ಲಿ ನೀರು ನಿಲ್ಲುತ್ತಿದ್ದು, ಹಾಗೂ ಅಲ್ಲಲ್ಲಿ ಒಳಚರಂಡಿ ಕೊಳವೆಸಾಲಿನ ಕಾಮಗಾರಿಗಳು ಅಪೂರ್ಣಗೊಂಡಿದ್ದು, ಪೂರ್ಣಗೊಳಿಸಲು ಕೋರಿರುತ್ತಾರೆ.

<u>**ಕ್ರಮ:-**</u> ವಾರ್ಡ್ ಸಹಾಯಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕೈಗೊಳ್ಳಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಂ.ಅ ಹೊರಮಾವು ರವರು ಪ್ರಥಮ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಹೊರಮಾವು ಉಪವಿಭಾಗ.
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner